ದಿ: 06-05-2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

3. ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ಮೂಲ ಪ್ರಕರಣವಾದ Spl.C.NDPS.9/2020 ರಲ್ಲಿ ನಿಪಿ-2 ಅಂತ ಗುರುತಿಸಲಾಗಿದೆ. ಅದನ್ನು ನೋಡಿ ಗುರುತಿಸುತ್ತೇನೆ. ಪಂಚನಾಮೆಯ ಕಾಲದಲ್ಲಿ ಮಾಡಿದ ಫೋಟೋಗಳನ್ನು ಈಗಾಗಲೇ ನಿಪಿ-3 ರಿಂದ 12 ಅಂತ ಮೂಲ ಪ್ರಕರಣವಾದ Spl.C.NDPS.9/2020 ರಲ್ಲಿ ಗುರುತಿಸಲಾಗಿದೆ. ಅವುಗಳನ್ನು ನೋಡಿ ಗುರುತಿಸುತ್ತೇನೆ.

4. ಆ ದಿನ ವಶಪಡಿಸಿಕೊಂಡು ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. fast track ಎಂಬ ಹೆಸರಿನ ಕೆಂಪು ಬಣ್ಣದ ಬ್ಯಾಗ್, ಇನೋ ಅಂತ ಹೆಸರಿನ ಬೂದುಬಣ್ಣದ ನೀಲಿಯಲ್ಲಿರುವ ಕಾಲೇಜು ಬ್ಯಾಗ್, ರಾಹುಲ್ ರವರ ಬಳಿ ಕೆಂಪು ಬಣ್ಣದ ಬ್ಯಾಗ್, ಪ್ರಮೋದ್ ರವರ ಎಡ ಜೇಬಿನಲ್ಲಿ ಬಳಿ ದೊರೆತ 23 ಖಾಲಿ ಪ್ಲಾಸ್ಟಿಕ್ ಕವರ್ ಗಳು ಬಲ ಜೇಬಿನಲ್ಲಿ 80 ಗ್ರಾಂ ತೂಕವುಳ್ಳ 11 ಕವರ್ ಗಳು, 3 ಮಾದರಿ ಗಾಂಜಾ ಸೀಲ್ಡ್ ಬ್ಯಾಗ್ ಇವುಗಳನ್ನು ಎಂ ಓ 1 ರಿಂದ 7 ಅಂತ ಮೂಲ Spl.C.NDPS.9/2020 ರಲ್ಲಿ ಗುರುತಿಸಲಾಗಿದೆ. ಅವುಗಳನ್ನು ಈಗ ನೋಡಿ ಗುರುತಿಸುತ್ತೇನೆ. 80 ಗ್ರಾಂ ತೂಕವುಳ್ಳ 11 ಕವರ್ ಗಳು ಪಿ ಪಿ ರವರು ಲಭ್ಯವಿರುವುದಿಲ್ಲ ಎಂದು ನುಡಿದಿರುತ್ತಾರೆ. ನಿಪಿ-3 ರಲ್ಲಿ ಕಾಣುವ ಆಟೋವನ್ನು ಆ ದಿನ ಪೋಲೀಸರು ವಶಪಡಿಸಿಕೊಂಡಿರುತ್ತಾರೆ. ಆ ದಿನ ಕಂಡು ಬಂದ ಆರೋಪಿತರು ಅಂದರೆ ವಿ ಸಿ ಮುಖಾಂತರ ಕಾಣುತ್ತಿರುವ 2 ಆರೋಪಿ ಮತ್ತು ನ್ಯಾಯಾಲಯದ ಮುಂದೆ ಇರುವ ಒಬ್ಬ ಆರೋಪಿ ಇರುತ್ತಾನೆ.

**ಪಾಟೀ ಸವಾಲುಃ ಶ್ರೀ ಕೆ.ಕೆ.(ಎಲ್.ಎ.ಡಿ.ಸಿ.) ., ವಕೀಲರಿಂದ 3 ನೇ ಆರೋಪಿತರ ಪರವಾಗಿ**:

5. ನಮ್ಮ ಕಛೇರಿಯಿಂದ ಗ್ರಾಮಾಂತರ ಪೊಲೀಸ್ ಠಾಣೆಯು 03 ಕಿ.ಮೀ. ಅಂತರ ಇರುತ್ತದೆ. ಸದರಿ ರಸ್ತೆಯಲ್ಲಿ ಸಾಕಷ್ಟು ಸರ್ಕಾರಿ ಕಛೇರಿಗಳು ಇರುತ್ತವೆ ಅಂದರೆ ನಿಜ. ನಾನು ಎಲ್ಲಾ ಪ್ರಕರಣದಲ್ಲಿ ಪಂಚರಾಗಿದ್ದೇನೆ ಅಂದರೆ ನಿಜ. ಹರಿಹರದ ಬೈ ಪಾಸ್ ರಸ್ತೆಯಲ್ಲಿ ವೈನ್ ಶಾಪ್, ಅಂಗಡಿಗಳು ಮತ್ತು ಪೆಟ್ರೋಲ್ ಬಂಕ್ ಇವೆ ಅಂದರೆ ಪೆಟ್ರೋಲ್ ಬಂಕ್ ಇಲ್ಲ, ಡಾಬಾ ಇವೆ. ಅಲ್ಲಿ ಪೆಟ್ರೋಲ್ ಬಂಕ್ ಇಲ್ಲ ಅಂತ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಬೈ ಪಾಸ್ ರಸ್ತೆಯ ಎಡಗಡೆಯಲ್ಲಿ ಪೆಟ್ರೋಲ್ ಬಂಕ್ ಇದೆ. ಅನಗವಾಡಿ ಕ್ರಾಸ್ ನಲ್ಲಿ ಮತ್ತೊಂದು ಪೆಟ್ರೋಲ್ ಬಂಕ್ ಇದೆ ಅಂದರೆ ನನಗೆ ಗೊತ್ತಿಲ್ಲ. ಆ ಅಂಗಡಿಗಳಲ್ಲಿ ಸಿಸಿಟಿವಿ ಇದೆ ಅಂದರೆ ನಿಜ. ಆ ಬೈ ಪಾಸ್ ರಸ್ತೆಯಲ್ಲಿ ವಿಳದ್ಯೆಲೆ ಮಾರ್ಕೆಟ್ ಇದೆ ಅಂದರೆ ನಿಜ. ಅದು ಜನನಬೀಡ ಪ್ರದೇಶ ಅಂದರೆ ನಿಜ.

6. ನಿಪಿ-1 ನ್ನು ಎಷ್ಟು ಗಂಟೆಗೆ ಜಾರಿ ಮಾಡಿದರು ಅಂದರೆ ಮಧ್ಯಾಹ್ಷ 12.20 ಗಂಟೆಗೆ ಮಾಡಿದರು. ಆ ಸಮಯದಲ್ಲಿ ನಿಪಿ-1 ರಲ್ಲಿ ಬರೆದಿಲ್ಲ ಅಂದರೆ ನಿಜ. ಆ ಬೈ ಪಾಸ್ ನಲ್ಲಿ ದಸ್ತು ವಾಹನ ಯಾವಾಗಲೂ ಓಡಾಡುತ್ತಿರುತ್ತದೆ ಅಂದರೆ ನಿಜ. ನಿಪಿ-3 ರಲ್ಲಿ ಯಾರೂ ID Card ಧರಿಸಿಲ್ಲ ಅಂದರೆ ನಿಜ. ನನ್ನ ಸಮಕ್ಷಮ Search list ಮಾಡಿಲ್ಲ ಸಹಿ ಪಡೆದುಕೊಂಡಿಲ್ಲ. Memo of Arrest ಗೆ ನನ್ನ ಸಹಿ ಪಡೆದುಕೊಂಡಿಲ್ಲ. Chain of custody ಮಾಡಿಲ್ಲ. ಸ್ಥಳದಲ್ಲಿ ನಕಾಶೆಯನ್ನು ತಯಾರಿಸಿಲ್ಲ. ಸ್ಥಳದಲ್ಲಿ ವಿಡಿಯೋಗ್ರಾಫಿ ಮಾಡಿಲ್ಲ. ಆರೋಪಿತರಿಂದ ಯಾವುದೇ ವಸ್ತುವನ್ನು ವಶಪಡಿಸಿಕೊಂಡಿಲ್ಲ, ನಾನು ಪೊಲೀಸ್ ಠಾಣೆಗೆ ಹೋಗಿ ಸಹಿ ಮಾಡಿದ್ದೇನೆ ಅಂದರೆ ಸರಿಯಲ್ಲ.

7. ಹರಿಹರದಲ್ಲಿ ಆರೋಗ್ಯ ಮಾತೆ ಚರ್ಚ್ ಇದೆ ಅಂದರೆ ನಿಜ. ಅಲ್ಲಿ ವರ್ಷದಲ್ಲಿ ವಾರಗಂಟಲೆ ಜಾತ್ರೆ ಆಗುತ್ತದೆ ಅಂದರೆ ನಿಜ. 3 ನೇ ಆರೋಪಿಯು ಆ ದಿನ ಚರ್ಚೆಗೆ ಬಂದವರನ್ನು ಪೊಲೀಸರು ಅವರನ್ನು ಕರೆದುಕೊಂಡು ಹೋಗಿ ದಾಖಲಿಸಿ, ಪೊಲೀಸರು ಹೇಳಿದ ಹಾಗೆ ನಾನು ಸುಳ್ಳು

ಸಾಕ್ಷಿ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ. ಡಾಬಾದ ಕಾನೆಶುಮಾರಿ ನಂಬರ ನನಗೆ ಗೊತ್ತಿಲ್ಲ ಹಾಗೂ ಅದು ಯಾವ ಸರ್ವೆ ನಂಬರನಲ್ಲಿದೆ ಅಂತ ನನಗೆ ಗೊತ್ತಿಲ್ಲ. ನಿಪಿ-3ರ ಫೋಟೋದಲ್ಲಿ ಅದೇ ಭರಣಿ ಹೋಟೆಲ್ ಅಂತ ತೋರಿಸಲು ಯಾವುದೇ ಗುರುತು ಇಲ್ಲ ಅಂದರೆ ನಿಜ. ನಾನು ಹೇಳಿದ ರೀತಿಯಲ್ಲಿ ಯಾವುದೇ ಭರಣಿ ಹೋಟೆಲ್ ಇಲ್ಲ ಅಂದರೆ ಸುಳ್ಳು. ಆ ಫೋಟೋದಲ್ಲಿ ಇಂಡಿಯನ್ ಡಾಬಾ ಕಾಣುತ್ತಿಲ್ಲ ಅಂದರೆ ಉತ್ತರ ದಿಕ್ಕಿನಲ್ಲಿದೆ. ನಿಪಿ-3ರಲ್ಲಿ ಪಪ್ಪಾಯ ತೋಟ ಕಾಣುತ್ತಿಲ್ಲ. ಸಾಕ್ಷಿದಾರರು ಹೇಳುತ್ತಾರೆ ಭರಣಿ ಹೋಟೆಲ್ ನ ಪಕ್ಕದಲ್ಲಿ ಇದೆ. ನಾನು ಹೇಳಿದ ರೀತಿಯಲ್ಲಿ ಯಾವುದೇ ಪಪ್ಪಾಯ ತೋಟ ಇಲ್ಲ ಅಂದರೆ ಸುಳ್ಳು. ಮುದ್ದೆ ಮಾಲುಗಳನ್ನು ಆರೋಪಿತರಿಂದ ವಶಪಡಿಸಿಕೊಂಡಿದ್ದು ಸುಳ್ಳು ಅಂದರೆ ಸರಿಯಲ್ಲ. ಮು.ಮಾ.1 ರಿಂದ 7 ಯಾವುದು ಗಾಂಜಾ ಅಲ್ಲ ಅಂದರೆ ಸುಳ್ಳು.

**ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿತರ ಪರವಾಗಿ**:

3 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.